aglasem.com

FOR KARNATAKA CLASS 10 PREPARATION

Karnataka SSLC Model Question Paper 2027 for Kannada Third Language (Paper 2) Key Answers

EXAM	YEAR	TYPE	SUBJECT
Karnataka Class 10	2027	Answer Key	Kannada

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ

6ನೇ ಅಡ್ಡರಸ್ತೆ, ಮಲ್ಲೇಶ್ವರಂ,ಬೆಂಗಳೂರು – 560003

KARNATAKA SCHOOL EXAMINATION AND ASSESSMENT BOARD

6th Cross, Malleshwaram, Bengaluru – 560003

2025 -26 ರ ಎಸ್.ಎಸ್.ಎಲ್.ಸಿ ಮಾದರಿ ಪ್ರಶ್ನೆ ಪತ್ರಿಕೆ–2

S.S.L.C. MODEL QUESTION PAPER- 2 : 2025-26

ವಿಷಯ : ತೃತೀಯ ಭಾಷೆ ಕನ್ನಡ

Subject : Third Language - KANNADA

ಮಾದರಿ ಉತ್ತರಗಳು

MODEL ANSWERS

ಸಮಯ: 3 ಗಂಟೆ | **ವಿಷಯ ಸಂಕೇತ : 62K**

ಗರಿಷ್ಠ ಅಂಕಗಳು : 80 | **Subject code : 62K**

ಪ್ರಶ್ನೆ ಸಂಖ್ಯೆ	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು
I.	**ಬಹು–ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗೆ ಪ್ರತಿ ಸರಿಯುತ್ತರಕ್ಕೆ 1 ಅಂಕ)**	**8x1=8**
1.	ಕನ್ನಡ ವರ್ಣಮಾಲೆಯಲ್ಲಿರುವ ಒಟ್ಟು ವ್ಯಂಜನಾಕ್ಷರಗಳ ಸಂಖ್ಯೆ ಎ) 13 ಬಿ) 34 ಸಿ) 25 ಡಿ) 09 **ಉತ್ತರ:** ಬಿ) 34	
2.	'ಸ್ವಾತಂತ್ರ್ಯ' ಈ ಪದದ ವಿರುದ್ಧಾರ್ಥಕ ಪದ ಎ) ಅಪಸ್ವಾತಂತ್ರ್ಯ ಬಿ) ಬಿಡುಗಡೆ ಸಿ) ಪಾರತಂತ್ರ್ಯ ಡಿ) ನಿಸ್ವಾತಂತ್ರ್ಯ **ಉತ್ತರ:** ಸಿ) ಪಾರತಂತ್ರ್ಯ	
3.	'ಪುಸ್ತಕ' ಈ ಪದದ ತದ್ಭವ ರೂಪ ಎ) ಹೊತ್ತಗೆ ಬಿ) ಬುಸ್ತಕ ಸಿ) ಬುಕ್ ಡಿ) ಹುಸ್ತಕ **ಉತ್ತರ:** ಎ) ಹೊತ್ತಗೆ	
4.	ಭಾರತೀಯ ಸಂಸ್ಕೃತಿಯಲ್ಲಿ ಗುರುಗಳಿಗೆ ಅಗ್ರಸ್ಥಾನವಿದೆ. ಈ ವಾಕ್ಯದಲ್ಲಿರುವ 'ಗುರುಗಳಿಗೆ' ಪದವು ಈ ವಿಭಕ್ತಿಗೆ ಉದಾಹರಣೆಯಾಗಿದೆ ಎ) ಪ್ರಥಮ ಬಿ) ತೃತೀಯ ಸಿ) ಚತುರ್ಥಿ ಡಿ) ಪಂಚಮಿ **ಉತ್ತರ:** ಸಿ) ಚತುರ್ಥಿ	

5. ಕೆಳಗಿನವುಗಳಲ್ಲಿ ಆಗಮ ಸಂಧಿಗೆ ಉದಾಹರಣೆಯಾದ ಪದ

ಎ) ದೇವೋನ್ಮಾದ ಬಿ) ಮಹಾತ್ಮ

ಸಿ) ಜೀವನೋತ್ಸಾಹ ಡಿ) ತಲೆಯನ್ನು

ಉತ್ತರ: ಡಿ) ತಲೆಯನ್ನು

6. ಬರವಣಿಗೆಯಲ್ಲಿ ಇನ್ನೊಬ್ಬರ ಹೇಳಿಕೆಯನ್ನು ಯಥಾವತ್ತಾಗಿ ತಿಳಿಸಲು ಬಳಸುವ ಲೇಖನ ಚಿಹ್ನೆ

ಎ) ಉದ್ಧರಣ ಬಿ) ಆವರಣ

ಸಿ) ಭಾವಸೂಚಕ ಡಿ) ಪ್ರಶ್ನಾರ್ಥಕ

ಉತ್ತರ: ಎ) ಉದ್ಧರಣ

7. 'ಗೌರಿಯ ಮುಖ ಕಮಲದಂತೆ ಅರಳಿತು' ಈ ವಾಕ್ಯದಲ್ಲಿರವ ಅಲಂಕಾರ

ಎ) ರೂಪಕಾಲಂಕಾರ ಬಿ) ಉತ್ಪ್ರೇಕಾಲಂಕಾರ

ಸಿ) ಉಪಮಾಲಂಕಾರ ಡಿ) ದೃಷ್ಟಾಂತಾಲಂಕಾರ

ಉತ್ತರ: ಸಿ) ಉಪಮಾಲಂಕಾರ

8. ಭವಿಷ್ಯತ್ ಕಾಲದ ಕಾಲಸೂಚಕ ಪ್ರತ್ಯಯವಿದು

ಎ) ದ ಬಿ) ಉವ

ಸಿ) ಉತ್ತ ಡಿ) ಉದ

ಉತ್ತರ: ಬಿ) ಉವ

II ಸಂಬಂಧೀಪದ ಬರೆಯುವುದು (ಪ್ರತಿ ಸರಿಯುತ್ತರಕ್ಕೆ ಒಂದು ಅಂಕ) 4x1=4

9. ಗೊರೂರು : ಭಾರತ : : ಮಿನಿಪೊಲೀಸ್ ನಗರ : ----------

ಉತ್ತರ: ಅಮೇರಿಕ

10. ಶಿಶುನಾಳದ ಸಂತ : ಶರೀಫರು : : ಹುಲುಗೂರಿನ ಸಂತ: ----------

ಉತ್ತರ: ಖಾದರ್ ಷಾ ವಲಿ

11. ಸ್ವಸ್ವಭಾವ ಚಹರೆ ಬೇರೆ : ತಾಯ ಬಸಿರು ಒಂದೆ : : ಕಳಸ ಶಿಲುಬೆ ಬಿಳಿ ಮಿನಾರು : -----

ಉತ್ತರ: ಧರ್ಮದುಸಿರು ಒಂದೇ

12. ಸಾವಿರಾರು ಕೆರೆ ತುಂಬಿ : ಜೋತಾಡು ತಾವೆ ಕುಣಿಗಲು : : ಕುಚ್ಚಲು ಮೀನು : ----

ಉತ್ತರ: ಮುಂಗೈ ಕಂಡು ನಗುತಾವೆ

III. ಒಂದು ವಾಕ್ಯದಲ್ಲಿ ಉತ್ತರಿಸುವಿಕೆ 4x1=4

(ವಾಕ್ಯರೂಪದಲ್ಲಿ ಬರೆದ ಪ್ರತಿ ಸರಿಯುತ್ತರಕ್ಕೆ ಒಂದು ಅಂಕ)

13. ಉಲ್ಲಾಳದ ರಾಣಿ ಯಾರು ?

ಉತ್ತರ: ಉಲ್ಲಾಳದ ರಾಣಿ ಅಬ್ಬಕ್ಕ ದೇವಿ

14. ನವೀನ ಯುಗದ ಕೇತನ ಯಾವುದು ?

ಉತ್ತರ: ನವೀನ ಯುಗದ ಕೇತನ ಕ್ರಾಪುತಲೆ

15. ಧರ್ಮಪದನು ಯಾವ ದೇವಾಲಯದ ಮಹಾದ್ವಾರಕ್ಕೆ ಕಳಶವನ್ನು ಕೂಡಿಸಿದನು ?

ಉತ್ತರ: ಧರ್ಮಪದನು ಕೋನಾರ್ಕ್ ದೇವಾಲಯದ ಮಹಾದ್ವಾರಕ್ಕೆ ಕಳಶವನ್ನು ಕೂಡಿಸಿದನು

16. ನಾಗೇಶ್ ಹೆಗಡೆಯವರು ಹೈಸ್ಕೂಲ್ ಶಿಕ್ಷಣವನ್ನು ಎಲ್ಲಿ ಪಡೆದರು ?

ಉತ್ತರ: ನಾಗೇಶ್ ಹೆಗಡೆಯವರು ಹೈಸ್ಕೂಲ್ ಶಿಕ್ಷಣವನ್ನು ಯಡಳ್ಳಿಯಲ್ಲಿ ಪಡೆದರು.

IV. **ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವಿಕೆ** **8x2=16**

(ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಸರಿ ಉತ್ತರಕ್ಕೆ ಎರಡು ಅಂಕ ನೀಡುವುದು)

17. ಗಾಂಧೀಜಿಯವರು ಗೌರಮ್ಮನವರ ಮನೆಗೆ ಏಕೆ ಬಂದರು ?

ಉತ್ತರ:

1933 ರಲ್ಲಿ ಗಾಂಧೀಜಿಯವರು ಕರ್ನಾಟಕ ಪ್ರವಾಸ ಕೈಗೊಂಡು ಕೊಡಗಿನಲ್ಲಿ ಎರಡು ದಿನಗಳ ಕಾಲ ತಂಗಿದ್ದರು. ಆಗ ಗಾಂಧೀಜಿಯವರ ಪರಮ ಅನುಯಾಯಿಯಾಗಿದ್ದ ಗೌರಮ್ಮನವರು ತಮ್ಮ ಇಪ್ಪತ್ತೊಂದನೆಯ ವಯಸ್ಸಿನಲ್ಲಿ ಉಪವಾಸ ಸತ್ಯಾಗ್ರಹ ಮಾಡಿ, ಗಾಂಧೀಜಿಯವರು ತಮ್ಮಂತಹ ಸಾಧಾರಣ ಕುಟುಂಬದವರ ಮನೆಗೂ ಬರಬೇಕೆಂದು ಹಠವನ್ನು ಹಿಡಿದರು. ಆಗ ಕೊಡಗಿನ ಕಿತ್ತಲೆ ಹಣ್ಣು ನೀಡಿ ಎಳೆ ಬೆಲುವೆಯ ಉಪವಾಸವನ್ನು ಅಂತ್ಯಗೊಳಿಸಿದ ಗಾಂಧೀಜಿ ಗೌರಮ್ಮನವರಿಗೆ ಕೊಟ್ಟ ಮಾತಿನಂತೆ ಅವರ ಮನೆಗೂ ಬಂದರು.

18. ಮೋಹನಾಪುರದ ಸತ್ಯಾಗ್ರಹಿಗಳು ಮಾಡುತ್ತಿದ್ದ ಘೋಷಣೆಗಳಾವುವು?

ಉತ್ತರ:

'ಬೋಲೋ ಭಾರತ ಮಾತಾಕೀ ಜಯ್, ವಂದೇ ಮಾತರಂ' ಮಹಾತ್ಮಾ ಗಾಂಧೀಜಿ ಕಿ ಜಯ್'

'ರಾಮಸಿಂಗ್ ಕೀ ಜಯ್' ಇವೆಲ್ಲವೂ ಮೋಹನಾಪುರದ ಸತ್ಯಾಗ್ರಹಿಗಳು ಮಾಡುತ್ತಿದ್ದ ಘೋಷಣೆಗಳಾಗಿವೆ.

19. ಕುಲಕರ್ಣಿಯು ರಾಮಸಿಂಗನ ಮೇಲೆ ಗುಂಡು ಹಾರಿಸಲು ಕಾರಣವಾದ ಅಂಶಗಳನ್ನು ಬರೆಯಿರಿ.

ಉತ್ತರ:

ಮೋಹನಾಪುರದಲ್ಲಿ ನಡೆಯುತ್ತಿದ್ದ ಚಲೇಜಾವ್ ಚಳುವಳಿಯ ನಾಯಕತ್ವವನ್ನು ರಾಮಸಿಂಗ್ ವಹಿಸಿದ್ದನು. ಈ ಚಳುವಳಿಯನ್ನು ಹತ್ತಿಕ್ಕಲು ಬಂದ ಕುಲಕರ್ಣಿಯು ಹೋರಾಟವನ್ನು ನಿಲ್ಲಿಸುವಂತೆ ರಾಮಸಿಂಗನಿಗೆ ಆದೇಶಿಸುತ್ತಾನೆ.ಆದರೆ ರಾಮಸಿಂಗ್‌ನು ಇದಕ್ಕೆ ಒಪ್ಪದೆ ವಾದಿಸುತ್ತಾನೆ.ಉದ್ಧಟನಾಗಿ ವರ್ತಿಸುತ್ತಾನೆ.ಕುಲಕರ್ಣಿಯು ಮುಂದಡಿ ಇಟ್ಟರೆ ಚೆನ್ನಾಗಿರುವುದಿಲ್ಲ ಎಂದು ಎಚ್ಚರಿಸಿ ಅವರನ್ನು ಚದುರಿಸಲು ಗಾಳಿಯಲ್ಲಿ ಗುಂಡು ಹಾರಿಸುತ್ತಾನೆ.ಆದರೆ ರಾಮಸಿಂಗ್ ಒಪ್ಪದೆ ಎರಡು ಹೆಜ್ಜೆ ಮುಂದಿಟ್ಟು ಭಾರತ ಮಾತಾಕಿ ಜೈ ಎಂದು ಘೋಷಿಸಿದನು. ಇದನ್ನು ಕಂಡು ಕೋಪಗೊಂಡ ಕುಲಕರ್ಣಿ ರಾಮಸಿಂಗ್ನನ್ನು ಗುಂಡಿಟ್ಟು ಕೊಂದನು.

20. 'ವಿಶ್ವಮಿತ್ರ ಸೃಷ್ಟಿ'ಯು ಬೀಚಿಯವರ ಮೇಲೆ ಬೀರಿದ ಪ್ರಭಾವವೇನು ?

ಉತ್ತರ:

ಬೀಚಿಯವರ ಅಣ್ಣ ಪ್ರೊ. ಜಹಗೀರದಾರರ (ಈಗವರು ಆದ್ಯ ರಂಗಾಚಾರ್ಯ)

'ವಿಶ್ವಾಮಿತ್ರ ಸೃಷ್ಟಿ'ಯ ಎರಡು ಸಂಪುಟಗಳನ್ನು ತಂದುಕೊಟ್ಟರು ಅವು ಲೇಖಕರನ್ನು ಬಹುಬೇಗ ಸೆರೆ ಹಿಡಿದುವು. ಆಚಾರ್ಯರ ಆ ಮಾತಿನ ಚಮತ್ಕಾರ, ವಿಚಾರ ಮಂಡನೆ ಮುಂತಾದ ಕಲಾಕುಶಲತೆಗೆ ಅವರು ಮಾರುಹೋದರು ರಾಯರು ಬೀಚಿಯವರ ಹೃದಯವನ್ನು ಗೆದ್ದರೆ, ಆಚಾರ್ಯರು ಬೀಚಿಯವರ ತಲೆಯನ್ನು ಗೆದ್ದರು. ಕನ್ನಡದ ಈ ಎರಡು ಪುಸ್ತಕಗಳು ಬೀಚಿಯವರ ಮೇಲೆ ಅತ್ಯಂತ ಪ್ರಭಾವವನ್ನು ಬೀರಿದವು.

21. ಗ್ರಂಥಾಲಯವನ್ನು ಹೊಕ್ಕಾಗ ಕವಿಗೆ ಆದ ಅನುಭವವನ್ನು ತಿಳಿಸಿ.

ಉತ್ತರ:

ಜ್ಞಾನಸಾಗರದ ಪ್ರತಿ ರೂಪವೇ ಗ್ರಂಥಾಲಯ ಇಂತಹ ಗ್ರಂಥಾಲಯಕ್ಕೆ ಕವಿ ಹೋದಾಗ ಕಣ್ಣಿನ ದೃಷ್ಟಿ ಹರಿಯುವ ವರೆಗೂ ಬೆಟ್ಟದ ಸಾಲಿನಂತೆ ಗ್ರಂಥಗಳ ಸಾಲುಗಳನ್ನು ಕಂಡು ಬೆರಗಾಗಿ ನಿಂತು ಒಂದು ಕ್ಷಣ ಯೋಚಿಸಿದಾಗ ತಮ್ಮ ಮನದಲ್ಲಿರುವ ಅಹಂಕಾರವು ಆ ಗ್ರಂಥಸಾಲುಗಳಕೆಳಗೆ ಧೂಳಿನ ಕಣದಂತೆ ಎಂಬ

ಭಾವನೆ ಉಂಟಾಯಿತು ಎಂದು ಕವಿ ಹೇಳಿದ್ದಾರೆ.

22. ಡಾಂಬಿಕ ಭಕ್ತನ ಮನಸ್ಸು ಯಾವ ಯಾವ ಗುಣಗಳಿಂದ ತುಂಬಿದೆ ?

ಉತ್ತರ:

ಡಾಂಭಿಕ ಭಕ್ತನು ಉದಯಕಾಲದಲ್ಲಿ ಎದ್ದು ಗಡಗಡನೆ ನಡುಗುತ್ತ ನದಿಯಲ್ಲಿ ಸ್ನಾನ ಮಾಡುತ್ತಾನೆ.ತಾನು ನದಿಯಲ್ಲಿ ಮಿಂದು ಶುದ್ಧನಾದನೆಂದು ಹಿಗ್ಗುತ್ತಾ ಮಹಾ ಭಕ್ತನಂತೆ ನಟಿಸುತ್ತಾನೆ ಆದರೆ ಅವನ ಅಂತರಂಗದಲ್ಲಿ ಕೇವಲ ಮದ,ಮತ್ಸರ,ಕ್ರೋಧ ಮುಂತಾದ ಗುಣಗಳು ತುಂಬಿಕೊಂಡಿರುತ್ತವೆ.

23. ನಿಜವಾಗಿ ಪುರಂದರವಿಠಲನನ್ನು ಕಾಣುವ ಬಗೆಯನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

ಉತ್ತರ :

ನಾನು ಎಂಬ ಅಹಂಕಾರವನ್ನು ಬಿಟ್ಟು ಜ್ಞಾನಿಗಳ ಜೊತೆ ಸೇರಿ ಎಲ್ಲದಕ್ಕೂ ಹರಿಯೇ ಕಾರಣ.ಅವನ ಪ್ರೇರಣೆಯಿಂದಲೇ ಎಲ್ಲವೂ ನಡೆಯುವುದು ಎಂದು ಮೌನವಾಗಿ ಧ್ಯಾನಿಸುತ್ತ ಸ್ಮರಣೆ ಮಾಡಿದರೆ ನಿಜವಾಗಿ ಪುರಂದರ ವಿಠಲನನ್ನು ಕಾಣಬಹುದಾಗಿದೆ.

24. ಭಟ ಮತ್ತು ಆಚಾರವಂತರ ಅರ್ಹತೆಗಳನ್ನು ಕುರಿತು ಬರೆಯಿರಿ.

ಉತ್ತರ :

ಸೋಮೇಶ್ವರ ಶತಕದಲ್ಲಿ ಹೇಳಿರುವಂತೆ ಯುದ್ಧ ಮಾಡುವ ಸಾಮರ್ಥ್ಯದ ಗುಣವಿರುವವನೇ ಭಟನಾಗಲು ಅರ್ಹನಾಗಿರುತ್ತಾನೆ.ಅದೇ ರೀತಿ ಶಿವನನ್ನು ಬಿಟ್ಟಿರದೆ ಕಠಿಣ ವ್ರತ ನಿಯಮಗಳ ಮೂಲಕ ಆರಾಧಿಸುವವನು ಆಚಾರವಂತನಾಗಲು ಅರ್ಹನಾಗಿರುತ್ತಾನೆ.

V. ಸಂದರ್ಭಸಹಿತ ವಿವರಣೆ **2x3=6**

ಪಠ್ಯದ ಹೆಸರು,ಕೃತಿ,ಕರ್ತೃ 1 ಅಂಕ
ಸಂದರ್ಭ ವಿವರಣೆಗೆ 1 ಅಂಕ
ಭಾಷಾ ಶೈಲಿಗೆ 1 ಅಂಕ

25. "ದಯವಿಟ್ಟು ಇದನ್ನು ಓದಿ"

ಉತ್ತರ :

ಈ ವಾಕ್ಯವನ್ನು ಬೀಚಿಯವರು ಬರೆದಿರುವ ನನ್ನ ಭಯಾಗ್ರಫಿ ಎಂಬ ಆತ್ಮ ಚರಿತ್ರೆಯಿಂದ ಆಯ್ದ 'ನನ್ನ ಪುಸ್ತಕ ಪ್ರಪಂಚ'ವೆಂಬ ಪಾಠದಿಂದ ಆರಿಸಲಾಗಿದೆ.

ಶಂ.ಬಾ. ಜೋಷಿಯವರ 'ಯಕ್ಷಪ್ರಶ್ನೆ'. ಹಳೆಯ ಪೌರಾಣಿಕ ಕಥೆಯನ್ನು ಹೊಸ ಕಣ್ಣಿನಿಂದ ನೋಡುವ ಅವರ ಸಂಶೋಧನಾ ಪದ್ಧತಿ ಕನ್ನಡಿಗರಲ್ಲಿ ಅಸದೃಶ. ಹೊರನೋಟಕ್ಕೆ ಕೇವಲ ಗೊಡ್ಡು ಕತೆಗಳಾಗಿ ಕಾಣುವ ನಮ್ಮ ಧರ್ಮ ಗ್ರಂಥಗಳಲ್ಲಿ ಬರುವ ಕಥೆ, ಉಪಕಥೆಗಳಿಗೆ ಜೋಶಿಯವರು ಕೊಡುವ ಅರ್ಥ ಕನ್ನಡಕ್ಕೆ ಹೊಸದು. ಅಂದಿನ ಯಕ್ಷಪ್ರಶ್ನೆಯ ಕಥೆ ನಮಗಿಂದು ಬರಲಿರುವ ಸಮಾಜದ ದರ್ಶನವನ್ನು ಮಾಡಿಸುತ್ತದೆ ಎಂದು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

ಕೃತಿಗಳನ್ನು ಹೊಸ ದೃಷ್ಟಿಕೋನದಿಂದ ನೋಡಬೇಕೆಂದು ಹೇಳಿರುವುದು ಸ್ವಾರಸ್ಯಪೂರ್ಣವಾಗಿದೆ.

26. " ಪಾರ್ಥನೊಲು ತತ್ತರಿಸಿ ವಿಸ್ಮಿತನಾಗಿ"

ಉತ್ತರ:

ಈ ವಾಕ್ಯವನ್ನು ಸಿ.ಪಿ.ಕೆ ಯವರು ಬರೆದಿರುವ 'ಅನಂತ ಪೃಥ್ವಿ' ಎಂಬ ಕವನಸಂಕಲನದಿಂದ ಆಯ್ದ 'ಗ್ರಂಥಾಲಯದಲ್ಲಿ' ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

ಕವಿ ಗ್ರಂಥಾಲಯದೊಳಗೆ ಹೋದಾಗ ಅಲ್ಲಿದ್ದ ಗ್ರಂಥಗಳಲ್ಲಿ ಅನೇಕ ಮಹನೀಯರ, ಹಿರಿಯರ

ಜೀವನ ಸಾಧನೆಗಳ,ಬಾಳುಗಳ ಅವಶೇಷವಾಗಿದೆ.ಇದನ್ನು ಕಂಡ ಕವಿಗೆ ಕುರುಕ್ಷೇತ್ರ ಯುದ್ಧದಲ್ಲಿ ಶ್ರೀ ಕೃಷ್ಣನು ತನ್ನ ವಿಶ್ವರೂಪ ತೋರಿಸಿದಾಗ ಅರ್ಜುನನು ಅದನ್ನು ಭಯಗೊಂಡಂತೆ ಆಯಿತು ಎಂದು ತಿಳಿಸುವ ಸಂದರ್ಭದಲ್ಲಿ ಈ ಮಾತು ಬಂದಿದೆ.

ಜ್ಞಾನವನ್ನು ಭಗವಂತನ ವಿಶ್ವರೂಪಕ್ಕೆ ಹೋಲಿಸಿರುವುದು ಇಲ್ಲಿನ ಸ್ವಾರಸ್ಯವಾಗಿದೆ.

VI. ಕೆಳಗಿನ ಪ್ರಶ್ನೆಗಳಿಗೆ ಐದು ಅಥವಾ ಆರು ವಾಕ್ಯಗಳಲ್ಲಿ ಉತ್ತರಿಸಿವುದು **4x3=12**

27. ಮಿನಿಪೊಲೀಸ್ ನಗರದಲ್ಲಿ ಗೊರೂರು ತಪ್ಪಿಸಿಕೊಂಡ ಪ್ರಕರಣವನ್ನು ವಿವರಿಸಿರಿ.

ಉತ್ತರ:

ಗೊರೂರರು ಮಿನಿಪೊಲೀಸ್ ನಗರಕ್ಕೆ ಒಬ್ಬ ಮಿತ್ರರನ್ನು ನೋಡಲು ಹೋಗಿದ್ದರು.ಅವರು ನೋಡಲು ಹೋದವರು ಇರಲಿಲ್ಲ. ಅವರ ಪರಿಚಿತರೊಬ್ಬರು ಸಿಕ್ಕಿ ಗೊರೂರನ್ನು ಮೋಟಾರಿನಲ್ಲಿ ಕೂರಿಸಿಕೊಂಡು ತಮ್ಮ ಕೆಲಸದ ಮೇಲೆ ಹೊರಟರು, ಒಂದೆಡೆ ಗೊರೂರರು ಕಾರಿನಿಂದ ಇಳಿದು ಅವರು ಅದೇ ದಾರಿಯಲ್ಲಿ ಹಿಂದಿರುಗುವಾಗ ರಾತ್ರಿ 2 ಗಂಟೆಗೆ ತನ್ನನ್ನು ಕರೆದುಕೊಂಡು ಹೋಗಬೇಕೆಂದು ಹೇಳಿದ್ದರು. ದೀಪ ಹೊತ್ತಿದ ಮೇಲೆ ಗೊರೂರು ನಗರದಲ್ಲಿ ಅಲ್ಲಲ್ಲಿ ಸುತ್ತುತ್ತ ಅರಿವಿಲ್ಲದಂತೆ ಬಣ್ಣದ ಬಲ್ಬುಗಳು, ಕಮಾನುಗಳು, ಕಿಟಕಿಗಳು, ದೀಪರಾಶಿ, ಕಿಟಕಿಗಳ ದೀಪಾಲಂಕಾರ ಇವುಗಳನ್ನೆಲ್ಲ ನೋಡುತ್ತ ಮಿತ್ರರು ಬಂದು ಕರೆದುಕೊಂಡು ಹೋಗಲು ಗೊತ್ತುಮಾಡಿಕೊಂಡಿದ್ದ ಸ್ಥಳವನ್ನು ಬಿಟ್ಟು ಆಚೆ ಈಚೆ ಹೊರಟುಹೋದರು ಅನಂತರ ಏನು ಮಾಡಿದರೂ ಅವರ ಸ್ಥಳ ಸಿಕ್ಕಲಿಲ್ಲ. ಹೀಗೆ ಗೊರೂರರು ಮಿನಿನಪೊಲೀಸ್ ನಗರದಲ್ಲಿ ತಪ್ಪಿಸಿಕೊಂಡರು.

28. ಕರ್ಬಲಾ ಮತ್ತು ಅಲಾವಿಗಳ ನಡುವಿನ ವ್ಯತ್ಯಾಸವನ್ನು ತಿಳಿಸಿರಿ.

ಉತ್ತರ:

ಕರ್ಬಲಾ ಇರಾಕ್ ದೇಶದಲ್ಲಿರುವ ಸ್ಥಳ. ಹಜರತ್ ಹುಸೇನರು ಈ ಸ್ಥಳದಲ್ಲಿ ಶತ್ರುಗಳೊಡನೆ ಹೋರಾಡಿ ಹುತಾತ್ಮರಾದರು. ಮೊಹರಂ ಹಬ್ಬದ ಕೊನೆಯ ದಿನ ಹಜರತ್ ಹುಸೇನರನ್ನು ಸಾಂಕೇತಿಸುವ ಲೋಹದ ಹಸ್ತಗಳನ್ನು ಮೆರವಣಿಗೆಯಲ್ಲಿ ಊರ ಹೊರಗೆ ತಂದು ಸ್ನಾನ ಮಾಡಿಸಿ ಬಿಳಿ ಬಟ್ಟೆಯಲ್ಲಿ ಅವುಗಳನ್ನು 'ಗಂಟು' ಕಟ್ಟುತ್ತಾರೆ. ಇದು ಹುತಾತ್ಮರಾದ ಹುಸೇನರ ಸಾಂಕೇತಿಕ ಆಚರಣೆಯಾಗಿದೆ.

ಅಲಾವಿ–ಮೊಹರಂ ಹಬ್ಬದ ಸಂದರ್ಭದಲ್ಲಿ ಲೋಹದ ಹಸ್ತವಾದ 'ಬಾಬಯ್ಯ'ನನ್ನು ಕೂಡಿಸುವ 'ಬಾಬಯ್ಯನ ಗುಡಿ'ಯ ಮುಂದೆ ಗುಂಡಿ ತೋಡಿ ಅದರಲ್ಲಿ ಬೆಂಕಿ ಉರಿಸುತ್ತಾರೆ. ಆ ಗುಂಡಿಗೆ 'ಅಲಾವಿ' ಎಂದು ಕರೆಯುತ್ತಾರೆ. ಇವು ಕರ್ಬಲಾ ಮತ್ತು ಅಲಾವಿಗಿರುವ ವ್ಯತ್ಯಾಸಗಳಾಗಿವೆ.

29. **ನವಯುಗದ ನಿರ್ಮಾಣದಲ್ಲಿ ಯುವಜನತೆಯ ಪಾತ್ರವನ್ನು ನೀವು ಮೆಚ್ಚುವ ಅಂಶಗಳೊಂದಿಗೆ ವಿವರಿಸಿ.**

ಉತ್ತರ:

ನಾವೆಲ್ಲರು ಒಂದೆ ಜಾತಿ ,ಒಂದೆ ಮತ, ಒಂದೆ ಕುಲವೆಂಬ ಭಾವನೆಯನ್ನು ಹೊಂದಿ ಮನುಜರಾಗಿ ಬಾಳಬೇಕು.ಆದರೆ ಮನುಜರ ನಡುವೆ ಇರುವ ಜಾತಿ– ಮತ ಭೇದಗಳೆಂಬ ಅಡ್ಡ ಗೋಡೆಗಳನ್ನು ಪ್ರಳಯಕಾಲದ ರುದ್ರರಂತೆ ಇರುವ ಯುವಜನರು ಕುಟ್ಟಿ ಕೆಡವಬೇಕು.ಎಲ್ಲ ಮೌಢ್ಯ ಕಂದಾಚಾರಗಳನ್ನು ತೊಡೆದುಹಾಕಿ ನವಯುಗದ ಯುವಜನರು ಯೋಧರಂತೆ ನಾವೆಲ್ಲರು ಒಂದೆ ಎಂಬ ಯುದ್ಧಘೋಷಣೆಯೊಂದಿಗೆ ಮುಂದುವರಿಯಬೇಕು.ಹಳೆಯ ಕೊಳೆಯ ತೆಗೆದು ಸ್ವರ್ಗವನ್ನೇ ಭೂಮಿಗೆ ಎಳೆದು ತರಬೇಕು ಹೃದಯದಲ್ಲಿ ವಿಶಾಲವಾದ ಭಾವವನ್ನು ಹೊಂದಿ ಎಲ್ಲರನ್ನು ಪ್ರೀತಿಯಿಂದ ಸ್ವಾಗತಿಸಬೇಕು.ನಡೆ ನುಡಿಗಳ ನೂರು ಗೋಡೆಗಳು ನಮ್ಮ ನಡುವೆ ಎದ್ದು ನಿಂತರೂ ನಾವೆಲ್ಲರೂ ಒಂದೇ ತಾಯ ಮಕ್ಕಳೆಂಬ ಭವನೆಯನ್ನು ಇರಿಸಿಕೊಳ್ಳಬೇಕು. ಭೇದಭಾವವನ್ನು ಸುಟ್ಟುಪ್ರೀತಿ ಹಂಚಿ, ಮಾನವೀಯತೆಯನ್ನು ಬೆಳೆಸಿಕೊಂಡು ಮುಂದಕ್ಕೆ ಸಾಗಬೇಕು.ಜಾತಿ ಮತಗಳ ಗುಹೆಯೊಳಗಿನ ಕತ್ತಲೆಯಿಂದ ಹೊಬಂದ ವಿಸ್ತಾರದ ಬೆಳಕಿಗೆ ಸೇರಿಕೊಳ್ಳಬೇಕು.ಯುವಜನರು ನಾವೆಲ್ಲರೂ ಒಂದೆ ಎಂದು ಸಾರುವ ನವ ವಿಧಾತರು ಎಂದು ಕವಿ ಹೇಳಿದ್ದಾರೆ.

aglasem.com For more Question Papers, Sample Papers, Notes & Syllabus visit aglasem.com

30. ಮಳೆದೇವರಲ್ಲಿ ರೈತನು ಬೇಡಿಕೊಳ್ಳುವ ಪರಿಯನ್ನು ನಿಮ್ಮ ಮಾತಿನಲ್ಲಿ ಬರೆಯಿರಿ.

ಉತ್ತರ: ರೈತರಿಗೆ ಬೇಸಾಯವು ಪ್ರಧಾನ ವೃತ್ತಿ ,ಮಳೆ ಬಂದು ಕೆರೆಕಟ್ಟೆಗಳಲ್ಲಿ ತುಂಬಿ ಬೆಳೆದು ನಿಂತ . ಫಸಲನ್ನು ನೋಡಿದರೆ ಅವರಿಗೆ ಸಂತೋಷ. ಒಂದು ವೇಳೆ ಮಳೆ ಬಾರದಿದರೆ ದೇವರಲ್ಲಿ ಅವರು ಬೇಡುವ ರೀತಿ ಮನಕಲುಕುತ್ತದೆ. ರಕ್ಷಸುವವರಿಲ್ಲದೆ ಈ ಭೂಮಿ ಬರಡಾಗಿದೆ. ದನಕರುಗಳು ಆಹಾರ ವಿಲ್ಲದೆ ಸೊರಗಿಹೋಗಿವೆ. ಮಳೆರಾಯನೆ ನೀ ಬಂದು ಕಾಪಾಡು ಎಂದು ಬೇಡುತ್ತಾನೆ . ಪೂರ್ವ ದಿಕ್ಕಿನಲ್ಲಿ ಮೋಡ ಕಟ್ಟಿಕೊಂಡಿದೆ. ಮಳೆ ಬರುವ ಸೂಚನೆ ಕಾಣುತ್ತಿದೆ.ನಮ್ಮ ಮೇಲೆ ಕರುಣೆ ತೋರು ಎಂದು ಪ್ರಾರ್ಥಿಸುತ್ತಾರೆ. ಭೈರವ ಬೆಟ್ಟದ ಮೇಲೆ ಹೆಚ್ಚಾಗಿ ಸೋನೆ ಮಳೆಯನ್ನು ಸುರಿಸುವಂತೆ ಕೇಳಿಕೊಳ್ಳುತ್ತಾನೆ. ಸ್ವಾತಿ ಮಳೆ ಸುರಿದು ಸಾವಿರಾರು ಕೆರೆಗಳು ತುಂಬಿ ತುಳಕಬೇಕು.ಅಲ್ಲಿ ಬೆಳೆದ ಕುಚ್ಚಲು ಮೀನುಗಳನ್ನು ಹಿಡಿದು ಹೆಚ್ಚು ಲಾಭ ಗಳಿಸುವಂತೆ ಅನುಗ್ರಹ ನೀಡೆಂದು ಪ್ರಾರ್ಥನೆಯನ್ನು ಮಾಡಿಕೊಳ್ಳುತ್ತಾರೆ. ಸಮೃದ್ಧವಾಗಿ ಮಳೆಬೆಳೆಯಾಗಿ ಎಲ್ಲರೂ ಸುಖವಾಗಿರಲಿ ಎಂಬ ಸದಾಶಯ ಅವರ ಪ್ರಾರ್ಥನೆಯಲ್ಲಿ ವ್ಯಕ್ತವಾಗಿದೆ.

VII. ಕೆಳಗಿನ ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿಗಳನ್ನು ಕುರಿತು ವ್ಯಾಕ್ಯರೂಪದಲ್ಲಿ ಬರೆಯುವುದು **2x3=6**

31. ಮ.ನ ಮುಕ್ತಾಯಿ

ಉತ್ತರ :

ಮ.ನ. ಮುಕ್ತಾಯಿ ಅವರು ಶಿವಮೊಗ್ಗ ಜಿಲ್ಲೆಯ ಅರತೊಳಲು ಗ್ರಾಮದಲ್ಲಿ ೧೯೬೧ರಲ್ಲಿ ಜನಿಸಿದರು.ಇವರು ಸಣ್ಣ ಕತೆ, ಜೀವನ ಚರಿತ್ರೆ, ಲೇಖನ ಮತ್ತು ಪ್ರಬಂಧಗಳನ್ನು ಬರೆದಿದ್ದಾರೆ. 'ಕೊಡಗಿನ ಗೌರಮ್ಮ' ಜೀವನ ಚರಿತ್ರೆಯನ್ನು ಬರೆದಿದ್ದಾರೆ.

32. ಕೆ.ಎಸ್.ನಿಸಾರ್ ಅಹಮದ್

ಉತ್ತರ :

ಪ್ರೊ. ಕೆ.ಎಸ್. ನಿಸಾರ್ ಅಹಮದ್ ಇವರು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿಯಲ್ಲಿ ೧೯೩೬ರ ಫೆಬ್ರವರಿ ೫ರಂದು ಜನಿಸಿದರು. **'ಮನಸು ಗಾಂಧಿ ಬಜಾರು', 'ನೆನೆದವರ ಮನದಲ್ಲಿ', 'ಸುಮುಹೂರ್ತ', 'ಸಂಜೆ ಐದರ ಮಳೆ', 'ಸ್ವಯಂ ಸೇವೆಯ ಗಿಳಿಗಳು', 'ನಾನೆಂಬ ಪರಕೀಯ' 'ನಿತ್ಯೋತ್ಸವ', 'ಅನಾಮಿಕ ಆಂಗ್ಲರು', 'ನವೋಲ್ಲಾಸ'** ಮುಂತಾದ ಕೃತಿಗಳನ್ನು ಬರೆದಿದ್ದಾರೆ.

VIII. ಗಾದೆಯ ಮಾತನ್ನು ವಿಸ್ತರಿಸಿ ಬರೆಯುವುದು (ಯಾವುದಾದರೂ ಒಂದಕ್ಕೆ ಮಾತ್ರ) **1x3=3**

33. "ಕುಂಬಾರನಿಗೆ ವರ್ಷ: ದೊಣ್ಣೆಗೆ ನಿಮಿಷ"

ಅಥವಾ

"ಕೈ ಕೆಸರಾದರೆ ಬಾಯಿ ಮೊಸರು"

ಗಾದೆಯ ಮಹತ್ವ	1 ಅಂಕ
ಗಾದೆಯ ಅರ್ಥ/ ವಿವರಣೆ	1 ಅಂಕ
ಭಾಷಾಶೈಲಿ/ಉದಾಹರಣೆಗೆ	1 ಅಂಕ

IX. ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು.

34. ರಾಣಿ ಅಬಕ್ಕದೇವಿಯು ಪೋರ್ಚುಗೀಸರನ್ನು ಹೇಗೆ ಓಡಿಸಿದಳು ? ವಿವರಿಸಿರಿ.

ಉತ್ತರ:

ಪೋರ್ಚುಗೀಸರು ಭಾರೀ ನೌಕೆಯಲ್ಲಿ ಬಲಾಢ್ಯ ಪಡೆಯೊಂದಿಗೆ ಆಕ್ರಮಣಕ್ಕೆ ಸಜ್ಜಾಗಿ ಉಲ್ಲಾಳದ ಕರಾವಳಿಯಲ್ಲಿ ಲಂಗರು ಹಾಕಿದರಂತೆ. ಆಗ ರಾಣಿ ಅಬ್ಬಕ್ಕದೇವಿಯ ಮೊಗೇರು ಎಂಬ ಮೀನುಗಾರ ಸಾಹಸಿ ಸೈನಿಕರು ಕರಾಳ ರಾತ್ರಿಯಲ್ಲಿ ಸದ್ದು ಗದ್ದಲವಿಲ್ಲದೆ ನೂರಾರು ಸಣ್ಣ ದೋಣಿಗಳಲ್ಲಿ ಹೋಗಿ, ಸಾವಿರಾರು ತೆಂಗಿನಗರಿಯ ಉರಿಯುವ ದೀವಟಿಗೆಗಳನ್ನು ಕ್ಷಣಾರ್ಧದಲ್ಲಿ ಏಕಕಾಲಕ್ಕೆ ನೌಕೆಯ

ಮೇಲೆಸೆದರಂತೆ ಧಗಧಗನೆ ಉರಿಯುವ ನೌಕೆಯಿಂದ ದಿಕ್ಕೆಟ್ಟ ಪೋರ್ಚುಗೀಸ ಸೈನಿಕರು ಸಾವಿನಿಂದ ಪಾರಾಗಲು ಸಮುದ್ರಕ್ಕೆ ಹಾರಿದಾಗ, ಅಬ್ಬಕ್ಕದೇವಿಯ ಸೈನಿಕರ ಖಡ್ಗ, ಈಟಿಗಳಿಗೆ ಬಲಿಯಾದರು. ಹೀಗೆ ಪೋರ್ಚುಗೀಸರ ಹಡಗನ್ನು ಮುಳುಗಿಸಿ, ಮಿರಾಂಡಾ ಮತ್ತು ಡಿ ಮೆಲ್ಲೊ ಎಂಬ ಸೇನಾಪತಿಗಳನ್ನು ಓಡಿಸಿ ಸಪ್ತ ಸಮುದ್ರದಾಚೆ ವಿಖ್ಯಾತಳಾದಳು

ಅಥವಾ

ಕಿತ್ತೂರು ರಾಣಿ ಚೆನ್ನಮ್ಮನ ಸ್ವಾಭಿಮಾನ ಮತ್ತು ದೇಶಾಭಿಮಾನವನ್ನು ಕುರಿತು ಬರೆಯಿರಿ.

ಉತ್ತರ:

ಕೆಳದಿಯ ಚೆನ್ನಮ್ಮ ಮೊಗಲರನ್ನು ಸೋಲಿಸಿದರೆ, ಬೆಳಗಾವಿ ಜಿಲ್ಲೆಯ ಕಿತ್ತೂರು ಚೆನ್ನಮ್ಮ ಬಲಾಢ್ಯ ಬ್ರಿಟೀಷರನ್ನು ಸೋಳಿಸಿದಳು. ಅದರಲ್ಲೂ ಮಹಿಳೆ ಮತ್ತು ಮಕ್ಕಳನ್ನು ಅಕ್ಕರೆಯಿಂದ ಕಂಡ ಕರುಣಾಮಯಿ. ಮುಂದೆ ಹಿತಶತ್ರುಗಳೊಂದಿಗೆ ಪಿತೂರಿ ನಡೆಸಿ ಮದ್ದಿನಲ್ಲಿ ಸೆಗಣಿ ಸೇರಿಸಿ ರಾಣಿ ಚೆನ್ನಮ್ಮಳ ತೋಪು ಹಾರದಂತೆ ಮೋಸಮಾಡಿ ಅವಳನ್ನು ಸೆರೆ ಹಿಡಿದು ಇಟ್ಟಾಗ, ಸ್ವಾತಂತ್ರ್ಯದ ಕನಸನ್ನೇ ಕಂಡಳು ವೀರರಾಣಿ. ಸೆರೆಮನೆಯಲ್ಲಿ ಸಂಧಿಸಲು ಬಂದ ಸಂಗೊಳ್ಳಿ ರಾಯಣ್ಣ 'ತಾಯಿ' ಎಂದು ಕರೆದಾಗ "ತಾಯಿ ಎಂದು ಕರೆದ ಕನ್ನಡದ ಕಂದ ಯಾರು?" ಎದು ಕೇಳಿದ ಕೆಚ್ಚಿನ ರಾಣಿ ಚೆನ್ನಮ್ಮ. "ನಿಮ್ಮ ಧಮನಿ–ಧಮನಿಗಳಲ್ಲಿ ರಕ್ತದ ಕಣಗಳಿರುವವರೆಗೂ ವೀರರಾಗಿ ಹೋರಾಡಿ" ಎಂದು ಹುರಿದುಂಬಿಸಿದ ಕಿತ್ತೂರು ಚನ್ನಮ್ಮ, ಬ್ರಿಟಿಷರ ವಿರುದ್ಧ ಸ್ವಾತಂತ್ರ್ಯ ಹೋರಾಟದ ಕಹಳೆ ಊದಿದ್ದು ಝಾನ್ಸಿ ಲಕ್ಷ್ಮೀಬಾಯಿಗಿಂತಲೂ 24 ವರ್ಷ ಮೊದಲು!

X. ಪದ್ಯಭಾಗವನ್ನು ಪೂರ್ಣಮಾಡುವುದು : (ತಪ್ಪಿಲ್ಲದೆ ಬರೆದ ಪ್ರತಿ ಪೂರ್ಣ ಸಾಲಿಗೆ 1 ಅಂಕ) **1x4=4**

35. ಉತ್ತರ :

ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ
ಮುನಿಯ ಬೇಡ, ಅನ್ಯರಿಗೆ ಅಸಹ್ಯ ಪಡಬೇಡ
ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ
ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ
ಇದೇ ಕೂಡಲ ಸಂಗಮದೇವರನೊಲಿಸುವ ಪರಿ.

ಅಥವಾ

ದೇವಲೋಕ, ಮರ್ತ್ಯಲೋಕವೆಂಬುದು ಬೇರಿಲ್ಲ, ಕಾಣಿರೋ!
ಸತ್ಯವ ನುಡಿವುದೇ ದೇವ ಲೋಕ, ಮಿಥ್ಯವ ನುಡಿವುದೇ ಮರ್ತ್ಯಲೋಕ!
ಆಚಾರವೇ ಸ್ವರ್ಗ, ಅನಾಚಾರವೇ ನರಕ
ಕೂಡಲಸಂಗಮದೇವಾ ನೀವೇ ಪ್ರಮಾಣು.

XI. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. **1x4=4**

36. ರೈತರನ್ನು 'ಅನ್ನದಾತ' ದೇಶದ 'ಬೆನ್ನೆಲುಬು' ಎಂದೆಲ್ಲ ಕರೆಯುತ್ತಾರೆ. ಆದರೆ ಇಂದು ರೈತರ ಪರಿಸ್ಥಿತಿ ಚಿಂತಾಜನಕವಾಗಿದೆ. ನಿಸರ್ಗದ ಜೊತೆ ಸೆಣೆಸಾಡಬೇಕು. ಸಕಾಲಕ್ಕೆ ಸರಿಯಾಗಿ ಮಳೆ ಬರುವುದಿಲ್ಲ. ಉತ್ತಮ ಗುಣಮಟ್ಟದ ಬೀಜ ಗೊಬ್ಬರದ ಸಮಸ್ಯೆಯಿಂದ ಭೂಮಿ ಬರಿದಾಗುತ್ತಿದೆ. ಕ್ರಿಮಿಕೀಟಗಳ ಹಾವಳಿಯಿಂದ ಬೆಳೆಗೆ ರೋಗಗಳು ತಗುಲಿ ಬೆಳೆ ಸಿಗದ ಸಮಸ್ಯೆ, ಬೆಳೆ ಬೆಳೆದರೂ ಸರಿಯಾದ ಬೆಲೆ

ಸಿಗದೆ ರೈತರು ಸಾಕಷ್ಟು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ವ್ಯವಸಾಯ ಇಲ್ಲದಿದ್ದರೆ ದೇಶದ ಆಟವೇ ನಡೆಯದು. ಕೃಷಿಕರು ಭೂಮಿಯನ್ನು ಉಳುವುದಿಲ್ಲ ಎಂದು ಸತ್ಯಾಗ್ರಹ ಮಾಡಿದರೆ, ಜನರು ಆಹಾರವಿಲ್ಲದೆ ಸಾಯುವ ಪರಿಸ್ಥಿತಿ ಬರುತ್ತದೆ. ದೇಶದ ಅಭಿವೃದ್ಧಿ ಕುಂಠಿತವಾಗುತ್ತದೆ. ಗೆಡ್ಡೆ–ಗೆಣಸುಗಳನ್ನು ತಿಂದು,ಎಲೆಗಳ ರಸ, ಕುಡಿದು ಬದುಕುವ ಕಾಲ ಮತ್ತೆ ಬರಬಹುದು. ಆಹಾರಕ್ಕಾಗಿ ಮನುಷ್ಯರು ಮತ್ತು ಪ್ರಾಣಿಗಳ ನಡುವೆ ಹೋರಾಟ ಏರ್ಪಡಬಹುದು. ಆಹಾರವಿಲ್ಲದೆ ಬದುಕಲು ಸಾಧ್ಯವಿಲ್ಲ.ಅಕ್ಕಿ, ರಾಗಿ, ಗೋಧಿ, ಜೋಳ, ತರಕಾರಿಗಳನ್ನು ತಯಾರಿಸುವ ಯಾವ ಕಾರ್ಖಾನೆಗಳು ಇಲ್ಲ. ಇವಕ್ಕೆಲ್ಲ ರೈತರ ಬೆವರು ಭೂಮಿಗೆ ಸುರಿಯಬೇಕು.

ಪ್ರಶ್ನೆಗಳು

ಅ) ದೇಶದ ಬೆನ್ನೆಲುಬು ಎಂದು ಯಾರನ್ನು ಕರೆಯುತ್ತಾರೆ ?

ಉತ್ತರ : ರೈತರನ್ನು ದೇಶದ 'ಬೆನ್ನೆಲುಬು' ಎಂದು ಕರೆಯುತ್ತಾರೆ.

ಆ) ಯಾವ ಸಮಸ್ಯೆಯಿಂದ ಭೂಮಿ ಬರಿದಾಗುತ್ತಿದೆ ?

ಉತ್ತರ: ಉತ್ತಮ ಗುಣಮಟ್ಟದ ಬೀಜ ಗೊಬ್ಬರದ ಸಮಸ್ಯೆಯಿಂದ ಭೂಮಿ ಬರಿದಾಗುತ್ತಿದೆ.

ಇ) ಮನುಷ್ಯರು ಮತ್ತು ಪ್ರಾಣಿಗಳ ನಡುವೆ ಯಾವುದಕ್ಕಾಗಿ ಹೋರಾಟ ಏರ್ಪಡಬಹುದು ?

ಉತ್ತರ : ಮನುಷ್ಯರು ಮತ್ತು ಪ್ರಾಣಿಗಳ ನಡುವೆ ಆಹಾರಕ್ಕಾಗಿ ಹೋರಾಟ ಏರ್ಪಡಬಹುದು

ಈ) ಯಾವ ಆಹಾರ ಸಾಮಗ್ರಿಗಳನ್ನು ತಯಾರಿಸುವ ಕಾರ್ಖಾನೆಗಳಿಲ್ಲ ?

ಉತ್ತರ: ಅಕ್ಕಿ, ರಾಗಿ, ಗೋಧಿ, ಜೋಳ, ತರಕಾರಿಗಳನ್ನು ತಯಾರಿಸುವ ಯಾವ ಕಾರ್ಖಾನೆಗಳು ಇಲ್ಲ

XII. ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಕುರಿತು ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ. **1X4=4**

37. ಜಲ ಸಂರಕ್ಷಣೆ

ಅಥವಾ

ಸಂಪರ್ಕ ಮಾಧ್ಯಮದ ಉಪಯೋಗ ಮತ್ತು ದುಷ್ಪರಿಣಾಮ

ಪೀಠಿಕೆ	1ಅಂಕ
ವಿಷಯ ಜೋಡನೆ	1ಅಂಕ
ಉಪಸಂಹಾರ	1ಅಂಕ
ಭಾಷಾಶೈಲಿಗೆ	1ಅಂಕ
ಒಟ್ಟು	4 ಅಂಕ

XIII. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ. **1X5=5**

38. ನಿಮ್ಮನ್ನು ಶಿವಮೊಗ್ಗಾದ ಕುವೆಂಪು ಪ್ರೌಢಶಾಲೆಯ ವಿದ್ಯಾರ್ಥಿನಿ 'ಸಾನ್ವಿತ' ಎಂದು ಭಾವಿಸಿಕೊಂಡು,ನಿಮ್ಮ ಶಾಲೆಗೆ 10 'ಕನ್ನಡ ವ್ಯಾಕರಣದರ್ಶಿನಿ' ಪುಸ್ತಕಗಳನ್ನು ಕಳುಹಿಸಿಕೊಡುವಂತೆ ಕೋರಿ ಬೆಂಗಳೂರಿನಲ್ಲಿರುವ ಸ್ವಪ್ನಬುಕ್ ಹೌಸ್‌ನ ವ್ಯವಸ್ಥಾಪಕರಿಗೆ ಒಂದು ಪತ್ರವನ್ನು ಬರೆಯಿರಿ.

ಅಥವಾ

ನಿಮ್ಮನ್ನು ಬೆಂಗಳೂರಿನ ಸುಭಾಷ್ ಪ್ರೌಢಶಾಲೆಯಲ್ಲಿ ಓದುತ್ತಿರುವ 'ಸೌಮ್ಯ' ಎಂದು ಭಾವಿಸಿಕೊಂಡು ಶಾಲೆಯಲ್ಲಿ ನಡೆದ ಮಕ್ಕಳ ದಿನಾಚರಣೆಯ ಕಾರ್ಯಕ್ರಮವನ್ನು ಕುರಿತು, ಮೈಸೂರಿನ ಅರವಿಂದ ನಗರ ಬಡಾವಣೆಯಲ್ಲಿ ವಾಸವಾಗಿರುವ 'ಶಾಲಿನಿ' ಎಂಬ ಹೆಸರಿನ ನಿಮ್ಮ ಗೆಳತಿಗೆ ಒಂದು ಪತ್ರ ಬರೆಯಿರಿ.

ವ್ಯಾವಹಾರಿಕ ಪತ್ರ

ಇಂದ, ಗೆ, ವಿಳಾಸ, ಸಂಬೋಧನೆ, ವಿಷಯ	1 ಅಂಕ
ಪತ್ರದ ಒಡಲು	2 ಅಂಕ
ಸ್ಥಳ , ದಿನಾಂಕ, ಸಹಿಯೊಂದಿಗೆ ಮುಕ್ತಾಯ	1 ಅಂಕ
ವಿನ್ಯಾಸ, ಭಾಷಾ ಶೈಲಿಗೆ	1 ಅಂಕ
ಒಟ್ಟು	5 ಅಂಕ

ವೈಯಕ್ತಿಕ ಪತ್ರ :

ಇಂದ, ವಿಳಾಸ, ಸಂಬೋಧನೆ, ದಿನಾಂಕ	1 ಅಂಕ
ಪತ್ರದ ಒಡಲು	1 ಅಂಕ
ಗೆ, ವಿಳಾಸ, ಸಹಿಯೊಂದಿಗೆ ಮುಕ್ತಾಯ	1 ಅಂಕ
ವಿನ್ಯಾಸ, ಭಾಷಾ ಶೈಲಿಗೆ	1 ಅಂಕ
ಒಟ್ಟು	4 ಅಂಕ

aglasem.com For more Question Papers, Sample Papers, Notes & Syllabus visit aglasem.com